ತಾರೀಖು 27ನೇ ಜೂನ್ 1884.

ನಂ. 62.—ಚವಲೊಗ್ಗಾ ಮ್ಯುನಿಸಿಪ ವ ಯರಡನೇ ಕ್ಲಾಸ್ ಮಾಜಿಸ್ಟ್ರೇಟ್ ಮೆ॥ ಪೊನ್ನರಂಗಂ ಪೊದಲಿಯಾರ್ರು, ವಂದನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ. 63.—ಬೆಂಗಳೂರು ಡಿಸ್ಟ್ರಿಕ್ಟು, ಕ್ಲೋಸ್‌ಪೇಟೆ ತಾಲ್ಲೂಕು ಅಮಲ್‌ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಶಾಮಯ್ಯಂಗಾರ್ರು, ಯರಡನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ತಾರೀಖು 4ನೇ ಜುಲೈ 1884.

ನಂ. 64.—ಹಾಸನ ತಾಲ್ಲೂಕು ಶಿರಸ್ತೇದಾರ ನರಸಿಂಹಮೂರ್ತಿರಾಯರು, ಗ್ರಾಮದ 2ನೇ ಕ್ಲಾಸ್ ಜೆಪ್ಯೂಟಿ ಅಮಲ್‌ದಾರ್ ಮುಕ್ತು ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ನೊಕರರ್ನಾಡಲ್ಪಟ್ಟಿರುತ್ತಾರೆ.

ತಾರೀಖು 21ನೇ ಮಾರ್ಚ್ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬವೋಜೇಬ ಹುಕ್ಕುಂ,

ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್‌ನಾಮೆ.

ನಂ. 2320. ತಾರೀಖು 25ನೇ ಜೂನ್ 1884.

ಯುಜ್ಜಿಕ್ಯೂಟಿವ್ ಇಂಜಿನಿಯರ್ ಮೆ॥ ವಿ. ಯಚ್. ಕರವಿಯವರು ಮಾಹೆ ಮಜಕೂರ್ ತಾರೀಖು 21ನೇ ಮುತ್ತಮಿನ ಮಧ್ಯಾನ್ಹಾತ್ಪರ ಬೆಂಗಳೂರು ಡಿವೀಜನಿನ ಚಾರ್ಜನ್ನು ಮೆ॥ ಆರ್. ಸ್ಕಾಲ್ಡ್‌ವೆಲ್ ಯವರಿಂದ ವಹಿಸಿರುತ್ತಾರೆ. ಮೆ॥ ಸ್ಕಾಲ್ಡ್‌ವೆಲ್‌ಯವರಿಗೆ ಕೊಡಲ್ಪಟ್ಟಿದ್ದ ಯರಡು ತಿಂಗಳ ವಿವಿಲೀಜ್ ರಜಾವನ್ನು ಅವರು ಆ ತಾರೀಖು ಲಾಗಾಯತು ಉಪಯೋಗಿಸಿಕ್ಕೊಂಡಿರುತ್ತಾರೆ.

ಸಿ. ಯಚ್. ಎಂ. ಕೆಸಿಂಗರ್ಟ್, ಕೆಪ್ಟ್. ಆರ್. ಈ.,
ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರಟೇರಿ.